Sri ALUR HANUMANTHAPPA.—There is no bar to construct pick-ups wherever necessary. The Government will sympathetically consider applications for loans for irrigation wells.

Minor Irrigation Works.

*Q—9. Sri M. C. BASAPPA (Chamarajanagar).—

Will the Government be pleased to state:—

(a) whether it is not a fact that Officers of the Public Works Department are asked not to sanction any fresh minor irrgation works due to shortage of funds;

(b) if so, whether Government would withdraw such order with a view to boost food production on a war footing?

A.—Sri ALUR HANUMANTHAPPA (Deputy Minister for Minor Irrigation).—

(a) Yes.

(b) The ban order has been modified to the extent necessary.

ಶ್ರೀ ಎಂ. ಸಿ. ಬಸಪ್ಪ.—(ಬಿ) ಭಾಗಕ್ಕೆ ಅವಶ್ಯವಿದ್ದಷ್ಟು ಮಟ್ಟಿಗೆ ಬದಲಾವಣೆ ಮಾಡಲಾಗಿದೆ ಎಂದು ಹೇಳಲಾಗಿದೆ. ಇದನ್ನು ವಿವರಿಸುವುದಕ್ಕಾಗುತ್ತದೆಯೇ?

†ಶ್ರೀ ಆಲೂರು ಹನುಮಂತಪ್ಪ.—ಎಲ್ಲಿ ಏನೂ ಹೊಸ ಕೆಲಸಗಳಾಗಲಿ, ಹಳೆಯ ಕೆಲಸಗಳಾಗಲಿ ಇರುವುದಿಲ್ಲ ಅಂಥ ಕಡೆಗಳಲ್ಲಿ ಇವತ್ತಿನ ಅಭಾವ ಪರಿಸ್ಥಿತಿಯಲ್ಲಿ ಕೆಲಸಗಳನ್ನು ತೆಗೆದು ಕೊಳ್ಳುವ ಬಗ್ಗೆ ಸರ್ಕಾರ ಒಂದು ಆಜ್ಞೆ ಮಾಡಿದೆ. ಅಂಥ ಪ್ರದೇಶಗಳಲ್ಲಿ ಎರಡು ಕೋಟಿ ರೂಪಾಯಿ ಹಣವನ್ನು ಖರ್ಚು ಮಾಡಲು ಕೊಟ್ಟಿದ್ದೇವೆ. ಅದರಲ್ಲಿ ಮೈಸೂರು ಡಿವಿಜಿನ್‌ಗೆ 75 ಲಕ್ಷ ರೂಪಾಯಿ ಕೊಟ್ಟಿದೆ. ಅದರಲ್ಲಿ ಹೊಸ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಅಡ್ಡಿ ಇಲ್ಲ ಎಂದು ಹೇಳಿದ್ದೇವೆ.

ಶ್ರೀ ಎಂ. ಸಿ. ಬಸಪ್ಪ.—ಈ ಕೆಲಸಗಳನ್ನು ಮಂಜೂರು ಮಾಡುವುದರಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ ಈ ಅಧಿಕಾರವನ್ನು ಕೊಟ್ಟಿದ್ದೀರಾ ಅಥವಾ ಸರ್ಕಾರದವರೇ ನೇರವಾಗಿ ಮಂತ್ರಿಗಳು ಕಾರ್ಯಕ್ರಮ ಹಾಕಿಕೊಂಡು ಪ್ರವಾಸ ಮಾಡಿ ಅಲ್ಲಿಯ ಅವಶ್ಯಕತೆಗಳನ್ನು ಪರಿಶೀಲನೆ ಮಾಡಿ ಆಜ್ಞೆ ಮಾಡುವಂತೆ ಆರ್ಡರ್ ಮಾಡಲಾಗಿದೆಯೇ ಹೇಗೆ?

ಶ್ರೀ ಆಲೂರು ಹನುಮಂತಪ್ಪ.—ಮಂತ್ರಿಗಳು ಯಾವ ಅಧಿಕಾರವನ್ನೂ ಇಟ್ಟುಕೊಂಡಿಲ್ಲ. ಕ್ಯಾಷ್‌ಪ್ರೋಗ್ರಾಂನಲ್ಲಿ 31-3-1966 ರಲ್ಲಿ ಮುಗಿಯುವುಂಥ ಕೆಲಸಗಳು, ಜೂನ್ 66 ರಲ್ಲಿ ಮುಗಿಯುವ ಕೆಲಸಗಳು ಎಷ್ಟಿವೆ, ಅದರಲ್ಲಿ ಯಾವುವು ಅತಿ ಮುಖ್ಯವಾದುವು ಎಂದು ಆಯಾ ಪ್ರದೇಶದ ಜಿಲ್ಲಾಧಿಕಾರಿಗಳಿಂದ ಮತ್ತು ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲಿನ ಅಭಿಪ್ರಾಯವನ್ನು ಪಡೆದು ಕೆಲಸ ಮಾಡಬೇಕು ಎಂದು ಅವರಿಗೇ ಅಧಿಕಾರವನ್ನು ಕೊಟ್ಟಿದೆ.

ಶ್ರೀ ಎಂ. ಸಿ. ಬಸಪ್ಪ.—ಜಿಲ್ಲಾಧಿಕಾರಿಗಳಿಂದ ಈ ಬಗ್ಗೆ ಏನಾದರೂ ಕೆಲಸಗಳ ಪಟ್ಟಿಯನ್ನು ತರಿಸಿಕೊಂಡಿದ್ದಾರೆಯೇ, ಹಾಗೆ ತರಿಸಿದ್ದ ಪಕ್ಷದಲ್ಲಿ ಚಾಮರಾಜನಗರ ತಾಲ್ಲೂಕಿನ ಪಟ್ಟಿಯನ್ನು ತರಿಸಿಕೊಳ್ಳಲಾಗಿದೆಯೇ?

ಶ್ರೀ ಆಲೂರು ಹನುಮಂತಪ್ಪ.—ಎರಡು ಕೋಟಿ ರೂಪಾಯಿಗಳನ್ನು ಆಯಾ ಜಿಲ್ಲೆಗೆ ಸಂಬಂಧಪಟ್ಟಂತೆ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿದೆ.

ಶ್ರೀ ಕೆ. ಲಕ್ಕಪ್ಪ.—ಪಬ್ಲಿಕ್ ವರ್ಕ್ಸ್ ಇಲಾಖೆಯಿಂದ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಮೂರು ಜನ ಮಂತ್ರಿಗಳು ದೇಶಾದ್ಯಂತ ಪ್ರವಾಸ ಮಾಡಿ ಸ್ಥಳದಲ್ಲಿಯೇ ಪರಿಶೀಲನೆ ಮಾಡಿ ಕೆಲಸ ವನ್ನು ತೆಗೆದುಕೊಳ್ಳತಕ್ಕ ಏರ್ಪಾಡು ಮಾಡುತ್ತೇವೆ ಎಂದು ಹೇಳಿದ್ದರು. ಆದರೆ ಯಾವ ಹೊಸ ಕೆಲಸಗಳನ್ನು ಕೂಡ ತೆಗೆದುಕೊಳ್ಳಕೂಡದು ಎಂದು ಸ್ಥಳದ ಅಧಿಕಾರಿಗಳಿಗೆ ಆದೇಶ ನೀಡಿರತಕ್ಕದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಮೂರು ಜನ ಮಂತ್ರಿಗಳು ಪ್ರವಾಸ ಮಾಡಿದಾಗ ಎಷ್ಟರ ಮಟ್ಟಿಗೆ ಅಲ್ಲಿನ ಕೆಲಸ ಕಾರ್ಯಗಳು ಇವೆ, ಹೊಸ ಕೆಲಸಗಳನ್ನು ಮುಗಿಸುವುದಕ್ಕೆ ಆಗುತ್ತದೆಯೇ ಇಲ್ಲವೇ, ಅಲ್ಲಿ ಅವಶ್ಯಕವಾಗಿ ಎಷ್ಟು ಕೆಲಸಗಳನ್ನು ಮಾಡಬೇಕಾಗುತ್ತದೆ ಎನ್ನುವುದನ್ನು ಪರಿಶೀಲನೆ ಮಾಡತಕ್ಕದ್ದು ಮುಖ್ಯವಾದ ಕೆಲಸ. ಆದರ ಜೊತೆಗೆ ಎಲ್ಲಿ ಕೆಲಸವಿಲ್ಲವೋ ಅಲ್ಲಿ ಕೆಲಸವನ್ನು ಒದಗಿಸಿ ಕೊಡತಕ್ಕದ್ದೂ ಬಹಳ ಮುಖ್ಯವಾದ ಕೆಲಸ. ಅದಕ್ಕೋಸ್ಕರ ಈಗಾಗಲೇ ಪ್ರವಾಸವನ್ನು ಕೈ ಕೊಂಡಿದ್ದು ಮುಗಿದಿದೆ. ಅನೇಕ ಕೆಲಸಕಾರ್ಯಗಳನ್ನು ಆದಷ್ಟು ಬೇಗ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಎಂ. ಗುರೆಡ್ಡಿ.—"ಆಹಾರೋತ್ಪತ್ತಿಯನ್ನು ಹೆಚ್ಚಿಸುವ ದೃಷ್ಟಿಯಿಂದ ಸಣ್ಣ ನೀರಾವರಿ ಯೋಜನೆಯ ಸಲುವಾಗಿ ಪ್ರಾಶಸ್ತ್ಯವನ್ನು ಕೊಟ್ಟಿದ್ದೇವೆ, ಕೊಡುತ್ತಿದ್ದೇವೆ, ಕೇಂದ್ರ ಸರ್ಕಾರದಿಂದ ಹೆಚ್ಚಿನ ಸಹಾಯ ದೊರೆಯುತ್ತದೆ" ಎನ್ನುವ ಮಾತೆಲ್ಲ ಈಗ ಎಲ್ಲಿ ಹೋಗಿದೆ ?.....

ಅಧ್ಯಕ್ಷರು.—ಈ ವಿಷಯಗಳನ್ನು ರಾಜ್ಯಪಾಲರ ಭಾಷಣದ ಚರ್ಚೆಯ ಕಾಲದಲ್ಲಿ ಹೇಳ ಬಹುದು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಶಾಸನ ಸಭೆ ಮೂರು ದಿವಸ ಆಹಾರ ವಿಷಯದಲ್ಲಿ ಚರ್ಚೆ ಮಾಡಿತು. ಮಂತ್ರಿಗಳು ಒಬ್ಬರಾದ ಮೇಲೆ ಒಬ್ಬರಂತೆ ಮೂರು ನಾಲ್ಕು ಜನ ಪ್ರವಾಸ ಮಾಡಿ ಸಣ್ಣ ನೀರಾವರಿಯ ಹೊಸ ಕೆಲಸಗಳನ್ನು ತೆಗದುಕೊಳ್ಳಬೇಕು, ಆಹಾರ ಉತ್ಪಾದನೆಯನ್ನು ಜಾಸ್ತಿ ಮಾಡಬೇಕು ಎಂದು ಇಂಜಿನಿಯರುಗಳಿಂದ ಕೆಲಸಗಳ ಪಟ್ಟಿಯನ್ನು ತರಿಸಿಕೊಂಡು ಒಬ್ಬ ಮಂತ್ರಿ ಒಪ್ಪಿದರೆ ಇನ್ನೊಬ್ಬರು ಒಪ್ಪದೆ, ಇನ್ನೊಬ್ಬರು ಒಪ್ಪಿದರೆ ಮತ್ತೊಬ್ಬರು ಒಪ್ಪದೆ ಇರುವುದರಿಂದ ಕೆಲಸ ಕಾರ್ಯಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಸ್ವಾಮಿ ?

ಶ್ರೀ ಆಲೂರು ಹನುಮಂತಪ್ಪ.—ಮಾನ್ಯ ಸದಸ್ಯರು ಹೇಳುವುದು ಊಹಾಪೋಹದ ವಿಷಯ ವಾಗಿದೆ. ಯಾವ ಮಂತ್ರಿಗಳು ಸಹ ಭಿನ್ನಾಭಿಪ್ರಾಯಗಳನ್ನು ಹೊರಗೆಡವತಕ್ಕ ಸಂದರ್ಭಗಳು ಬರುವುದಿಲ್ಲ. ಅನೇಕ ವಿಷಯಗಳನ್ನು, ಕಮಿಟೆಡ್ ವರ್ಕ್ಸ್, ಸ್ಪಿರ್ ಓವರ್ ವರ್ಕ್ಸ್ ಏನಿವೆಯೋ ಅವುಗಳನ್ನು ಆದಷ್ಟು ಬೇಗ ಮುಗಿಸಬೇಕು ಎನ್ನುವುದು ಸರ್ಕಾರದ ಗುರಿಯಾಗಿತ್ತು. ಈಗಾಗಲೇ ಮೂರನೆಯ ಯೋಜನೆಯಲ್ಲಿ ಇದ್ದಂಥ ಟಾರ್ಗೆಟ್ಟನ್ನು ಮೀರಿ ಎಂಟೂವರೆ ಕೋಟಿ ರೂಪಾಯಿ ಮಾತ್ರ ಹಣ ಒದಗಿಸಿದ್ದುದನ್ನು ಮೀರಿ 16 ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ. ಆಹಾರದ ಕೊರತೆಯನ್ನು ಹೋಗಲಾಡಿಸಬೇಕು ಎನ್ನುವ ಉದ್ದೇಶದಿಂದ ಇಷ್ಟು ಹಣವನ್ನು ಖರ್ಚು ಮಾಡ ಲಾಗಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸಣ್ಣ ನೀರಾವರಿ ಯೋಜನೆಗೆ 50 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಡೆಲ್ಲಿಯಿಂದ ಬರುವಾಗ ಮಾನ್ಯ ಮಂತ್ರಿಗಳು ಈ ಸಭೆಗೆ ಆಶ್ವಾಸನೆಯನ್ನು ಕೊಟ್ಟಿದ್ದರು. ಮಾಸ್ಟರ್ ಪ್ಲಾನ್ ಗೋಸ್ಕರ 50 ಕೋಟಿ ರೂಪಾಯಿ ಹಣವನ್ನು ಕೇಂದ್ರದಿಂದ ನಿರೀಕ್ಷಣೆ ಮಾಡುತ್ತಿದ್ದೇವೆ ಎಂದು ಹೇಳಿದ್ದಾರೆ. ಇವತ್ತಿನ ಸಂದರ್ಭದಲ್ಲಿ ಫೈಸ್ಟ್ ಪ್ರೋಗ್ರಾಂನಲ್ಲಿ 50 ಕೋಟಿ ರೂಪಾಯಿನಲ್ಲಿ ಎಷ್ಟು ಹಣವನ್ನು ಖರ್ಚು ಮಾಡಬೇಕೆಂದು ಸರ್ಕಾರದವರು ತೀರ್ಮಾನ ಮಾಡಿದ್ದಾರೆ ?

ಶ್ರೀ ಆಲೂರು ಹನುಮಂತಪ್ಪ.—ಮುಖ್ಯ ಮಂತ್ರಿಗಳು ಅನೇಕ ಸಂದರ್ಭಗಳಲ್ಲಿ ಹೇಳಿರುವಂತೆ ಈ ಮಾಸ್ಟರ್ ಪ್ಲಾನ್ ಕಾರ್ಯಗತ ಮಾಡಬೇಕಾಗಿದ್ದರೆ ನಮಗೆ ಹೆಚ್ಚು ಹಣ ಬೇಕು. 13 ಲಕ್ಷ ಎಕರೆ ಪ್ರದೇಶವನ್ನು ಹೊಸದಾಗಿ ನೀರಾವರಿ ಮಾಡುವುದಕ್ಕೆ 80 ಕೋಟಿ ರೂಪಾಯಿ ಬೇಕಾಗುತ್ತದೆ. ಇದೆಲ್ಲ ಒಂದು ದಿವಸದಲ್ಲಿ ಮಾಡತಕ್ಕ ಕೆಲಸವಲ್ಲ. ಫೈಸ್ಟ್ ಪ್ರೋಗ್ರಾಂನಲ್ಲಿ ನಾಲ್ಕನೆಯ ಯೋಜನೆ ಯಲ್ಲಿ ಕಾರ್ಯಗತ ಮಾಡತಕ್ಕ ಉದ್ದೇಶವನ್ನು ಇಟ್ಟುಕೊಂಡಿರುತ್ತೇವೆ. ಇದೆಲ್ಲ ಕೇಂದ್ರ ಸರ್ಕಾರದ ಸಹಾಯ ಮತ್ತು ನಮ್ಮಲ್ಲಿ ಎಷ್ಟು ಹಣವನ್ನು ಒದಗಿಸಿಕೊಂಡು ಕೆಲಸ ಮಾಡಬಹುದು ಎನ್ನುವುದನ್ನು ಅವಲಂಬಿಸುತ್ತದೆ. ಈ ಬಗ್ಗೆ ಸರ್ಕಾರ ತೀವ್ರವಾಗಿ ಪರಿಶೀಲನೆ ಮಾಡುತ್ತಿದೆ.

ಶ್ರೀ ಎಸ್. ಎಂ. ಗುರೆಡ್ಡಿ.—ಸಣ್ಣ ನೀರಾವರಿ ಕೆಲಸ ತೆಗೆದುಕೊಳ್ಳುವಾಗ ಯಾವ ಜಿಲ್ಲೆಗಳಲ್ಲಿ ನೀರಾವರಿ ಕಡಮೆ ಇದೆ ಅಲ್ಲಿಗೆ ಆದ್ಯತೆ ಕೊಡುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಹೌದು.

Sri S. SIVAPPA.—Sir, a confusion has been created by the answers given by the Hon'ble Minister. On the one side he says that the order has been issued not to take up any fresh works while on the other side he says that Government has revised it to see that some fresh works are taken up. On account of the confusion created by these conflicting answers, may I request the Government to make it categorically clear as to what is their policy in this behalf? Are they going to issue instructions to the local officers to take up fresh works?

Sri S. NIJALINGAPPA (Chief Minister).—The decision is this: Those works that are in the course of construction and which can be finished early would be given priority. Where there are some minor works which can be used before June 1966, they will also be taken up.

ಶ್ರೀ ಎಂ. ಸಿ. ಬನಪ್ಪ.—ಮುಂದಿನ ಹಣಕಾಸಿನ ವರ್ಷದಲ್ಲಾದರೂ ಅಧಿಕಾರಿಗಳು ಹೆಚ್ಚು ಕೆಲಸ ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಡುತ್ತೀರಾ?

Sri ALUR HANUMANTHAPPA.—That is the intention of Government.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—(ಅ) ಪ್ರಶ್ನೆಗೆ ಉತ್ತರ ಕೊಟ್ಟಿರುವಂತೆ ಯಾವ ಭಾಗದಲ್ಲಿ ಹಾಗೆ ಮಾಡಲಾಗಿದೆ? ಶಿವಮೊಗ್ಗ ಜಿಲ್ಲೆಯಲ್ಲಿ ಹೆಚ್ಚು ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಆದೇಶ ಕೊಡಲಾಗಿದೆಯೇ?

ಶ್ರೀ ಆಲೂರು ಹನುಮಂತಪ್ಪ.—ಪ್ರತಿಯೊಂದು ಜಿಲ್ಲೆಯಲ್ಲೂ ಅಭಾವವಿರುವ ಕಡೆ ಮಳೆ ಕಡಮೆಯಿರುವ ಕಡೆ ಕೆಲಸ ತೆಗೆದುಕೊಳ್ಳಲು ಪಟ್ಟಿ ಮಾಡಲಾಗಿದೆ, ಆ ಪ್ರಕಾರ ಕೆಲಸ ತೆಗೆದು ಕೊಳ್ಳಲಾಗುತ್ತಿದೆ.

ಶ್ರೀ ಕೆ. ಲಕ್ಕಪ್ಪ.—ಅಭಾವ ಪೀಡಿತ ಪ್ರದೇಶಗಳಲ್ಲಿ ಹೊಸ ಕೆಲಸ ತೆಗೆದುಕೊಳ್ಳಲು ನಿರ್ದಿಷ್ಟವಾದ ಯೋಜನೆ ಮಾಡಲಾಗಿದೆಯೇ? ಹೊಸ ಕೆಲಸ ತೆಗೆದುಕೊಳ್ಳುವುದಕ್ಕೆ ಮಂತ್ರಿಗಳ ಆಜ್ಞೆಯಾಗಬೇಕೇ ಅಥವಾ ನೇರವಾಗಿ ಅಧಿಕಾರಿಗಳೇ ಕೆಲಸಮಾಡಲು ಅಧಿಕಾರ ಅವರಿಗೆ ಕೊಡಲಾಗಿದೆಯೇ?

ಶ್ರೀ ಎಸ್. ನಿಜಲಿಂಗಪ್ಪ.—ಅವರು ಕೇಳುವುದು ಜನರಲ್ ಪ್ರಶ್ನೆ, ಈ ವರ್ಷ ಅಭಾವ ಪ್ರದೇಶ ಜಾಸ್ತಿಯಾಗಿದೆ. ಬರೀ ಕೆರೆ ಕಟ್ಟುವುದು ಮಾತ್ರವಲ್ಲದೆ ಬಾಕಿ ಕೆಲಸಗಳನ್ನೂ ಮಾಡಬೇಕಾಗಿದೆ. ಕೆರೆ ಕೆಲಸ, ಬಾವಿ ಕೆಲಸ, ರಿಪೇರಿ, ಕೆರೆ ಆಳಪಡಿಸುವುದು ಮುಂತಾದ ಶಾಶ್ವತವಾದ ಕೆಲಸಗಳನ್ನು ಕೈಕೊಳ್ಳಬೇಕಾಗಿದೆ. ಎಲ್ಲೆಲ್ಲಿ ಏನೇನು ಮಾಡಲು ಸಾಧ್ಯವಿದೆಯೋ ಅದನ್ನೆಲ್ಲಾ ಮಾಡುತ್ತೇವೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಮೈನರ್ ಇರಿಗೇಷನ್ ಕೆಲಸಗಳಿಗೆ ಕೇಂದ್ರದಿಂದ ಹಣ ಕೇಳುತ್ತಿದ್ದೀರಿ. ಕೇಂದ್ರ ಸರಕಾರದವರು ಸ್ಪಿಲ್‌ಓವರ್ ಕೆಲಸಗಳಿಗೆ ಹಣ ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತಿದ್ದಾರೆ. ಅನೇಕ ಕೆಲಸಗಳು 8-10 ವರ್ಷಗಳಿಂದ ಬಾಕಿ ಇದೆ. ಅದಕ್ಕೆ ಕಾರಣ ಏದೆ. ಕಾರಣಕರ್ತರು ಯಾರೋ ಅವರ ಮೇಲೆ ಕ್ರಮ ಕೈಕೊಳ್ಳುತ್ತೀರೋ?

ಶ್ರೀ ಎಸ್. ನಿಜಲಿಂಗಪ್ಪ.—ಅದು ತಮ್ಮ ಸಲಹೆ.

ಶ್ರೀಮತಿ ನುಶೀರಾಬಾಯಿ ಷಾ.—ಬಿಜಾಪುರ ಜಿಲ್ಲೆ ಅಭಾವಕ್ಕೆ ಗುರಿಯಾಗಿರುವ ಜಿಲ್ಲೆ, ಅಲ್ಲಿ ನರ್ವೆ ಮತ್ತು ಅಂದಾಜಾಗಿರುವ ಕೆಲವು ಕೆಲಸಗಳಿವೆ; ಮಳೆಯಾಗದೆ ಬಾವಿಗಳಲ್ಲಿ ನೀರಿಲ್ಲ. ಆದುದರಿಂದ ಆ ಜಿಲ್ಲೆಗೆ ಮೊದಲು ಗಮನ ಕೊಡುತ್ತೀರಾ?

ಶ್ರೀ ಎಸ್. ನಿಜಲಿಂಗಪ್ಪ.—ಬಿಜಾಪುರ ಜಿಲ್ಲೆ ಬಗ್ಗೆ ನಾಕಷ್ಟು ಸಹಾನುಭೂತಿಯಿದೆ.